2. ಮಗುವಿನ ಜನನ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

3. ಆರೋಗ್ಯ ಇಲಾಖೆಯ ಕಾರ್ಯಕ್ರಮದಂತೆ ರೋಗ ನಿರೋಧಕ ಚುಚ್ಚುಮದ್ದನ್ನು ಹಾಕಿಸಿರಬೇಕು.

4. ಕುಟುಂಬದ ಎರಡು ಹೆಣ್ಣು ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತ ಗೊಳಿಸಲಾಗಿದೆ.

5. ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು.

ಈ) ಹೌದು, ದಿನಾಂಕ : 01–04–2011 ರಿಂದ ಜನಿಸಿದ ಮಕ್ಕಳಿಗೆ ಬಿಪಿಎಲ್ ಪಡಿತರ ಚೀಟಿ ಕಡ್ಡಾಯಗೊಳಿಸಲಾಗಿದೆ.

ಪಶುಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

234 (892) ಶ್ರೀ ಖಾದರ್ ಯು.ಟಿ. (ಮಂಗಳೂರು) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಕ್ಷೇತ್ರವಾರು ವಿವರ ಒದಗಿಸುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯ ಪಶು ಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 13 ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು 35 ಪಶುವೈದ್ಯಕೀಯ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ :

ಕ್ರ. ಸಂ.	ಕ್ಷೇತ್ರ	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ
1	ಮಂಗಳೂರು ಉತ್ತರ	1	6
2	ಮಂಗಳೂರು ದಕ್ಷಿಣ	1	1
3	ಮಂಗಳೂರು	–	2
4	ಮುಲ್ಕಿ– ಮೂಡಬಿದ್ರೆ	2	3
5	ಬಂಟ್ವಾಳ	3	8
6	ಬೆಳ್ತಂಗಡಿ	2	6
7	ಪುತ್ತೂರು	2	5
8	ಸುಳ್ಯ	2	4
	ಒಟ್ಟು	13	35

ಬಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿವೆ:

ಕ್ರ. ಸಂ.	ಹುದ್ದೆಗಳು	ಸಂಖ್ಯೆ
1	ಸಹಾಯಕ ನಿರ್ದೇಶಕರು	1
2	ಪಶುವೈದ್ಯಾಧಿಕಾರಿ	24
3	ಜಾನುವಾರು ಅಧಿಕಾರಿ	1
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	23
5	ಪಶುವೈದ್ಯಕೀಯ ಪರೀಕ್ಷಕರು	26
6	ಪಶುವೈದ್ಯಕೀಯ ಸಹಾಯಕರು	50
7	ಲಿಪಿಕ ನೌಕರರು	3
8	ವಾಹನ ಚಾಲಕರು	3
9	ಡಿ–ದರ್ಜೆ ನೌಕರರು	112
	ಒಟ್ಟು	243

ಇ) **1. ಸಹಾಯಕ ನಿರ್ದೇಶಕರು :–** ಖಾಲಿ ಇರುವ ಈ ಹುದ್ದೆಯನ್ನು ಪಶುವೈದ್ಯಾಧಿಕಾರಿ ಹುದ್ದೆಯಿಂದ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

2. ಪಶುವೈದ್ಯಾಧಿಕಾರಿಗಳು :– ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನಿಯಮಗಳಡಿಯಲ್ಲಿ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ವಿಶೇಷ ನೇಮಕಾತಿ

ನಿಯಮಗಳು ರಚನೆಯಾದ ನಂತರ ಪಶುವೈದ್ಯಾಧಿಕಾರಿಗಳ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

3. ಜಾನುವಾರು ಅಧಿಕಾರಿ :– ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಜಾನುವಾರು ಅಧಿಕಾರಿಗಳ ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಮಯದಲ್ಲಿ ಈ ಹುದ್ದೆಯನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

4. ಹಿರಿಯ ಪಶುವೈದ್ಯ ಪರೀಕ್ಷಕರು :– ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯಕೀಯ ಪರೀಕ್ಷಕರುಗಳ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

5. ಪಶುವೈದ್ಯ ಪರೀಕ್ಷಕರು :– ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

6. ಪಶುವೈದ್ಯ ಸಹಾಯಕರು :– ಡಿ–ದರ್ಜೆ ಹುದ್ದೆಯಿಂದ ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವಾಗ ಹಾಗೂ ಪಶುವೈದ್ಯಕೀಯ ಸಹಾಯಕರನ್ನು ನೇರ ನೇಮಕಾತಿ ಮಾಡುವಾಗ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

7. ಅಧೀಕ್ಷಕರು :– ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

8. ದ್ವಿತೀಯ ದರ್ಜೆ ಸಹಾಯಕರು :– ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುವುದು.

9. ಡಿ–ದರ್ಜೆ ನೌಕರರು :– ನೇರ ನೇಮಕಾತಿ ಹಾಗೂ ಅನುಕಂಪಾರ್ಥ ಆಧಾರದ ಮೇಲೆ ಭರ್ತಿ ಮಾಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು ಹಾಗೂ ಅವಶ್ಯವಿರುವ ಕಡೆ ಹೊರಗುತ್ತಿಗೆ ಆಧಾರದ ಮೇಲೆ ಡಿ–ದರ್ಜೆ ನೌಕರರ ಕೆಲಸ ನಿರ್ವಹಿಸಲಾಗುವುದು.